# ನೋ ಎಂಟ್ರಿ

ತಂತ್ರಜ್ಞಾನ ಮುಂದುವರಿದಂತೆ ಮನುಷ್ಯ ಭೂಮಿಯಲ್ಲಿ ಕಾಲಿಡದ ಸ್ಥಳಗಳೇ ವಿರಳವಾಗುತ್ತಿವೆ. ಚಂದ್ರನಲ್ಲಿಯೂ ಹೆಜ್ಜೆಗುರುತು ಮೂಡಿಸಿದ್ದೇವೆ ಎಂದು ಬೀಗುತ್ತೇವೆ. ಚಂದ್ರಲೋಕದಲ್ಲಿ ನಿವೇಶನ ಕೊಳ್ಳುವ–ಮಾರುವ 'ಜಾಣ'ರೂ ಇದ್ದಾರೆ. ಹಣವೊಂದು ಇದ್ದರೆ ಸಾಕು, ಎಲ್ಲಿಗೆ ಬೇಕಾದರೂ ಹೋಗಿ ಬರಬಹುದು ಎಂಬ ಅಭಿಪ್ರಾಯವೂ ಅನೇಕರಲ್ಲಿದೆ. ಆದರೆ, ವಿಶ್ವದಾದ್ಯಂತ ಕೆಲವು ಅನೂಹ್ಯವೆನಿಸುವ ಅಪರೂಪದ ಸ್ಥಳಗಳಿದ್ದು, ನಾನಾ ಕಾರಣಗಳಿಗೆ ಅವೆಲ್ಲ 'ನಿಷೇಧಿತ ಪ್ರದೇಶಗಳು' ಎಂದರೆ ನೀವು ನಂಬಲೇಬೇಕು. ಅಂಥ 'ನೋ ಎಂಟ್ರಿ' ಸ್ಥಳಗಳ ಮಾಹಿತಿ ಇಲ್ಲಿದೆ.

■ ರೂಪಾ ಕೆ.ಎಂ.

## ಅಂಡಮಾನಿನ ಸೆಂಟಿನಲ್ ದ್ವೀಪ

ಅಂಡಮಾನ್ ದ್ವೀಪ ಸಮೂಹಗಳಲ್ಲಿ ಒಂದಾಗಿರುವ ಉತ್ತರ ಸೆಂಟಿನಲ್ ದ್ವೀಪದಲ್ಲಿ ಸೆಂಟಿನಲ್‌ನೆಸ್ ಬುಡಕಟ್ಟು ಜನಾಂಗ ವಾಸಿಸುತ್ತಿದೆ. ಈ ಜನಾಂಗ ಬಿಟ್ಟು ಉಳಿದಂತೆ ಯಾರೂ ದ್ವೀಪಕ್ಕೆ ಭೇಟಿ ಕೊಡುವಂತಿಲ್ಲ. ಹಾಗೇನಾದರೂ ನುಸುಳಿಕೊಂಡು ಆ ದ್ವೀಪವನ್ನೇನಾದರೂ ಪ್ರವೇಶಿಸಿಬಿಟ್ಟರೆ, ಈ ಬುಡಕಟ್ಟು ಜನಾಂಗ ಸಿಟ್ಟಿಗೇಳುವ ಸಾಧ್ಯತೆಯೇ ಹೆಚ್ಚು. ಭಂಡತನದಿಂದ ಹೋಗಿ ಹೆಣವಾದವರು ಇದ್ದಾರೆ. ಐವತ್ತು ಸಾವಿರ ವರ್ಷಗಳಿಂದ ಈ ಬುಡಕಟ್ಟು ಜನಾಂಗ ಇದೇ ದ್ವೀಪದಲ್ಲಿ ವಾಸಿಸುತ್ತಿದೆ ಎನ್ನಲಾಗಿದೆ. ಸದ್ಯ ಭಾರತ ಸರ್ಕಾರದ ಆಡಳಿತಕ್ಕೆ ಈ ದ್ವೀಪ ಒಳಪಟ್ಟಿದೆ.





## ಲಸ್ಕಾಯಕ್ಸ್ ಗುಹೆ

ವಿಶ್ವದಾದ್ಯಂತ ಇರುವ ಪುರಾತತ್ವಶಾಸ್ತ್ರಜ್ಞರು 'ಲಸ್ಕಾಯಕ್ಸ್ ಗುಹೆ' ಎಂದಾಕ್ಷಣ ಕಣ್ಣರಳಿಸುತ್ತಾರೆ. ಫ್ರಾನ್ಸ್‌ನ ಈ ಗುಹೆ ಸಂಶೋಧಕರಿಗೆ ಅಕ್ಷಯಪಾತ್ರೆಯೇ ಸರಿ. ಈ ಗುಹೆಯಲ್ಲಿ 17,300 ವರ್ಷಗಳಿಗಿಂತಲೂ ಹಳೆಯದಾದ ಪ್ರಾಚೀನ ಶಿಲಾಯುಗದ ವರ್ಣಚಿತ್ರಗಳಿವೆ. ಸಾಲು ಸಾಲು ವರ್ಣಚಿತ್ರಗಳು ಪ್ರಾಚೀನ ಶಿಲಾಯುಗದ ಕಾಲಘಟ್ಟ, ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತವೆ. ಹಾಗೆಂದು ಈ ಗುಹೆಯನ್ನೊಮ್ಮೆ ನೋಡಿಬರಬೇಕು ಅಂದುಕೊಂಡರೆ ಪ್ರಯೋಜನವಿಲ್ಲ. ವರ್ಣಚಿತ್ರಗಳನ್ನು ಕಾಪಿಡುವ ಉದ್ದೇಶದಿಂದ 1963ರಿಂದ ಗುಹೆಯಲ್ಲಿ ಸಾರ್ವಜನಿಕರ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.



## ಐಸ್‌ಗ್ರ್ಯಾಂಡ್ ದೇಗುಲ

ದೇಗುಲಗಳ ನಾಡು ಜಪಾನ್ ಮೋಹಕ ವಾಸ್ತುಶೈಲಿಯಿಂದ ಜಗತ್ಪ್ರಸಿದ್ಧಿ. ಹೆಚ್ಚೂಕಮ್ಮಿ 80 ಸಾವಿರಕ್ಕೂ ಹೆಚ್ಚು ದೇಗುಲಗಳು ಅಲ್ಲಿವೆ. ಅವುಗಳಲ್ಲಿ ಐಸ್ ಗ್ರ್ಯಾಂಡ್ ಎನ್ನುವ ದೇಗುಲ ಜಪಾನಿಯರ ಪವಿತ್ರ ಸ್ಥಳಗಳಲ್ಲಿ ಒಂದು. ತುಸು ದುಬಾರಿ ಎನಿಸುವ, ವೈಭವದ ವಾಸ್ತುಶೈಲಿಯನ್ನು ಆ ಮಂದಿರ ಹೊಂದಿದೆ. ಪ್ರತಿ 20 ವರ್ಷಗಳಿಗೊಮ್ಮೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ದೇಗುಲವನ್ನು ಮರು ನಿರ್ಮಾಣ ಮಾಡಲಾಗುತ್ತದೆ. ಆದರೆ, ಜಪಾನಿನ ರಾಜಮನೆತನದವರಷ್ಟೇ ದೇಗುಲದೊಳಗೆ ಪ್ರವೇಶ ಪಡೆಯಬಹುದು. ಹಾಗೆಂದು ಶ್ರೀಸಾಮಾನ್ಯರಿಗೆ ಪ್ರವೇಶ ನಿರಾಕರಿಸಿದ್ದಕ್ಕೆ ಪ್ರತಿಭಟನೆ ಹೂಡುವಂತಿಲ್ಲ.